ಕೋರ ಮಂಗಲ, ಅಡುಗೋಡಿ ಮತ್ತು ಮೈಕೋ ಲೇ ಔಟ್ ಮೂಲಕ ಹಾದು ಹೋಗುವಂತೆ ರಿಂಗ್ ರೂಟ್ ಆಗಿ ಪರಿವರ್ತಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಸೂಕ್ತವಲ್ಲ

ನಿಲುಗಡೆ ಮಾಡಲಾಗಿರುವ ಔರಾದ್ ಬೆಂಗಳೂರು ಸೂಪರ್ ಡಿಲಕ್ಸ್ ಬಸ್ಸಿನ ಮರು ಸಂಚಾರ ಪ್ರಾರಂಭ

919 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಔರದ್-ಬೆಂಗಳೂರು ನಗರ ಸೂಪರ್ ಡಿಲಕ್ಸ್ ಬಸ್ಸಿನ ಸಂಚಾರವನ್ನು ಯಾವಾಗ ಪ್ರಾರಂಭಿಸಲಾಯಿತು ಮತ್ತು ಆ ಬಸ್ಸು ಯಾವ ಮಾರ್ಗಗಳ ಮೂಲಕ ಬೆಂಗಳೂರು ತಲುಪುತ್ತಿತ್ತು?

ಆ) ಆ ಬಸ್ಸು ಎಷ್ಟು ದಿನ ಈ ಮಾರ್ಗದಲ್ಲಿ ಸಂಚಾರ ಮಾಡಿರುತ್ತದೆ?

ಇ) ಯಾವುದೇ ಕಾರಣಗಳನ್ನು ನೀಡದೆ ಆ ಮಾರ್ಗದ ಬಸ್ ಸಂಚಾರವನ್ನು ಹಠಾತ್ತನೇ ನಿಲ್ಲಿಸಲು ಕಾರಣಗಳೇನು?

ಈ) ಒಂದು ವೇಳೆ ಗಳಿಕೆ ಇಲ್ಲದಿರುವುದೋ ಅಥವಾ ಪ್ರಯಾಣಿಕರಿಲ್ಲದಿರುವುದೋ ಆ ಬಸ್ಸಿನ ಸಂಚಾರವನ್ನು ನಿಲ್ಲಿಸಿದ್ದಲ್ಲಿ ಪುನಃ ಈ ಬಸ್ಸಿನ ಸಂಚಾರವನ್ನು ಔರಾದ್ -ಬೀದರ್-ಹೈದರಾಬಾದ್ ಮೂಲಕವಾಗಿ ಬೆಂಗಳೂರಿಗೆ ತಲುಪುವಂತೆ ಸಂಚಾರವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಔರದ್-ಬೆಂಗಳೂರು ಸುಖಾಸೀನ ಸಾರಿಗೆಯನ್ನು ತಾ. 17-5-1992ರಂದು ಪ್ರಾರಂಭಿಸಲಾಯಿತು. ಮತ್ತು ಸಹ ಸಾರಿಗೆಯನ್ನು ಭಾಲ್ಕಿ, ಹುಮ್ನಾಬಾದ್, ಗುಲ್ಬರ್ಗ, ಜೇವರ್ಗಿ, ಶಹಾಪುರ, ಸುರಪುರ, ಲಿಂಗಸೂಗೂರು, ಸಿಂಧನೂರು, ಸಿರುಗುಪ್ಪ, ಬಳ್ಳಾರಿ, ಚಳ್ಳಕೆರೆ, ಹಿರಿಯೂರು, ಸಿರಾ ಮತ್ತು ತುಮಕೂರು ಮಾರ್ಗವಾಗಿ ಬೆಂಗಳೂರು ತಲುಪುತ್ತಿತ್ತು.

ಆ) 88 ದಿವಸಗಳು.

ಇ) ಪ್ರಯಾಣಿಕರ ಬೆಂಬಲ ಪಡೆಯಲು ವಿಫಲವಾಗಿದ್ದರಿಂದ.

ಈ) ಆಂಧ್ರ ಪ್ರದೇಶ ಸರ್ಕಾರದೊಡನೆ ಮುಂದಿನ ಅಂತರ ರಾಜ್ಯ ಸಾರಿಗೆ ಒಪ್ಪಂದದ ಸಮಯದಲ್ಲಿ ಇದನ್ನು ಪರಿಶೀಲಿಸಲಾಗುವುದು.

ಆಹಾರ ಇಲಾಖೆಯ ವತಿಯಿಂದ ಸಂಚಾರಿ ನ್ಯಾಯಬೆಲೆ ಅಂಗಡಿ

284 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?